ಅಸಲು ದಾವೆ ನಂ.96/2020

ಪಿ.ಡಬ್ಲೂಃ 1-

ದಿನಾಂಕಃ 02/07/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಕೆ ಎಂ ವಿ ವಕೀಲರಿಂದಃ**

1. ವಾದಿಯು ಯಾವ ದಾಖಲೆಗಳ ಆಧಾರದ ಮೇಲೆ ಈ ದಾವೆ ದಾಖಲಿಸಿದ್ದಾರೆ ಅಂದರೆ, ಯಾವುದೇ ದಾಖಲೆಗಳು ಇಲ್ಲ. ವಾದಿಯು ಮೊದಲು ದಾವಾ ಆಸ್ತಿಯಲ್ಲಿ ಬಾಡಿಗೆದಾರರು ಆಗಿದ್ದರು. ದಿ.24.07.2018 ರ ಕರಾರಿನಂತೆ ವಾದಿಯು ದಾವಾ ಆಸ್ತಿಯಲ್ಲಿ ಇದ್ದರು ಅನ್ನುವುದು ಸರಿ. ವಾದಿಯು ನನಗೆ ಸತತವಾಗಿ ದಿ.21.03.2019 ರವರೆಗೆ ಬಾಡಿಗೆ ಪಾವತಿ ಮಾಡಿದ್ದರು ಅನ್ನುವುದು ಸರಿ. ನಂತರ ನಾನು ದಾವಾ ಆಸ್ತಿಯನ್ನು ವಾದಿಗೆ ರೂ.8 ಲಕ್ಷಕ್ಕೆ ಮಾರಾಟ ಮಾಡುವ ಮಾತುಕತೆ ಆಗಿತ್ತು ಅನ್ನುವುದು ಸರಿಯಲ್ಲ. ಅದರಂತೆ ನಾನು ವಾದಿಯಿಂದ ರೂ.5 ಲಕ್ಷ ಮುಂಗಡ ಹಣ ಪಡೆದುಕೊಂಡಿದ್ದು ದಾಖಲೆಗಳನ್ನು ಸರಿಪಡಿಸಿಕೊಂಡು ರೂ.3 ಲಕ್ಷ ರೂಗಳನ್ನು ಪಡೆದುಕೊಂಡು ಕ್ರಯ ಪತ್ರ ಬರೆದುಕೊಡುತ್ತೇನೆ ಎಂದು ಒಪ್ಪಿಕೊಂಡಿದ್ದೆನು ಅನ್ನುವುದು ಸರಿಯಲ್ಲ.

2. ದಿ.21.03.2019 ರ ಕರಾರು ಪತ್ರದ ಮೇಲೆ ಈ ದಾವೆ ದಾಖಲಿಸಿದ್ದಾರೆ ಅಂದರೆ ಆ ರೀತಿ ಯಾವುದೇ ದಾಖಲೆ ಬರೆದುಕೊಟ್ಟಿಲ್ಲ. ನಾನು ಸದರಿ ದಾಖಲೆಯನ್ನು ಬರೆದುಕೊಟ್ಟಿದ್ದರೂ ಸಹ ಈಗ ಈ ದಾವೆಗೋಸ್ಕರ ಬರೆದುಕೊಟ್ಟಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅನ್ನುವುದು ಸರಿಯಲ್ಲ. ದಿ.21.03.2019 ರ ಕರಾರು ಪತ್ರದ ಪ್ರಕಾರ ನಾನು ಮುಂಗಡ ಹಣ ರೂ.5 ಲಕ್ಷಗಳನ್ನು ಪಡೆದಿದ್ದರಿಂದ ಆ ನಂತರ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಬಾಡಿಗೆ ಪಾವತಿಸುವ ಅವಶ್ಯಕತೆ ಇಲ್ಲ ಎಂದು ವಾದಿಗೆ ಮೌಖಿಕವಾಗಿ ತಿಳಿಸಿದ್ದೆನು ಅನ್ನುವುದು ಸರಿಯಲ್ಲ. ನನಗೆ ಈಗ ನಿಪಿ-18 ದಾಖಲೆಯನ್ನು ನೋಡುತ್ತಿದ್ದು ಅದರಲ್ಲಿ ನಿಪಿ-18(ಇ) (ಎಫ್) (ಜಿ) (ಹೆಚ್) ಸಹಿಗಳು ನನ್ನವಲ್ಲ. ನಾನು ನನ್ನ

ಸಹಿಯನ್ನು ಇಂಗ್ಲಿಷ್ ನಲ್ಲಿ ಮಾಡುತ್ತೇನೆ. ನಾನು ಸಲ್ಲಿಸಿರುವ ಪ್ರತಿವಾದ ಪತ್ರವನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿಗಳು ಇವೆ ಮತ್ತು ಅವುಗಳನ್ನು ಗುರುತಿಸುತ್ತಿದ್ದೇನೆ.

3. ಪ್ರತಿವಾದ ಪತ್ರದಲ್ಲಿರುವ ಸಹಿಗಳು ಮತ್ತು ನಿಪಿ-18(ಇ) (ಎಫ್) (ಜಿ) (ಹೆಚ್) ಸಹಿಗಳಲ್ಲಿ ವ್ಯತ್ಯಾಸವಿದೆ. ನಿಪಿ-18(ಇ) (ಎಫ್) (ಜಿ) (ಹೆಚ್) ಸಹಿಗಳನ್ನು ನನ್ನ ಸಹಿಗಳ ರೀತಿ ನಿಧಾನವಾಗಿ ಮಾಡಲಾಗಿದೆ. ಪಿಡಬ್ಲೂ 2 ಮತ್ತು ನನ್ನ ನಡುವೆ ಯಾವುದೇ ಮನಸ್ತಾಪ ಇಲ್ಲ. ದಿ.21.03.2019 ರ ಕರಾರು ಪತ್ರದ ಪ್ರಕಾರ ನಾನು ಕ್ರಯ ಪತ್ರ ಬರೆದುಕೊಟ್ಟಿಲ್ಲ ಎಂದು ವಾದಿಯು ನನ್ನನ್ನು ಭೇಟಿ ಆಗಿ ವಿಚಾರಿಸಿದ್ದರು ಅನ್ನುವುದು ಸರಿಯಲ್ಲ. ನಾನು ವಿನಾಕಾರಣ ಕಾಲಹರಣ ಮಾಡಿ ದಾವಾ ಸ್ವತ್ತಿನ ಬಳಿ ಹೋಗಿ ವಾದಿಯು ದಾವಾ ಸ್ವತ್ತನ್ನು ಬಿಡಬೇಕೆಂದು ಗಲಾಟೆ ಮಾಡಿದ್ದೆನು ಅನ್ನುವುದು ಸರಿಯಲ್ಲ. ಸದರಿ ವಿಚಾರವಾಗಿ ಪೋಲಿಸ್ ಠಾಣೆಗೆ ಹೋಗಿದ್ದೆನು ಅಂದರೆ ವಾದಿಯು ದಾವಾ ಆಸ್ತಿಯನ್ನು ಖಾಲಿ ಮಾಡುತ್ತಿಲ್ಲ ಎಂದು ದೂರು ನೀಡಲು ಹೋಗಿದ್ದೆನು. ನಾನು ವಾದಿಯ ಸ್ವಾಧೀನಕ್ಕೆ ಅಡ್ಡಿ ಪಡಿಸಿದ ಬಗ್ಗೆ ಮತ್ತು ದೌರ್ಜನ್ಯ ಮಾಡಿದ ಬಗ್ಗೆ ಅಸಲು ದಾವೆ ನಂ.403/2019 ರಂತೆ ವಾದಿ ನನ್ನ ವಿರುದ್ಧ ದಾವೆ ದಾಖಲಿಸಿದ್ದಾರೆ ಅನ್ನುವುದು ಸರಿ. ಸದರಿ ದಾವೆಯಲ್ಲಿ ದಾವೆ ತೀರ್ಮಾನವಾಗುವವರೆಗೂ ನಮ್ಮ ವಿರುದ್ಧ ತಾತ್ಕಾಲಿಕ ನಿರ್ಭಂದ ಕಾಜ್ಞೆ ಇದೆ ಅನ್ನುವುದು ಸರಿ.

4. ವಾದಿಯನ್ನು ದಾವಾ ಆಸ್ತಿಯಿಂದ ಖಾಲಿ ಮಾಡಿಸಲು ಅಸಲು ದಾವೆ 26/2020 ರಂತೆ ನಾನು ದಾವೆ ದಾಖಲಿಸಿದ್ದೇನೆ ಅನ್ನುವುದು ಸರಿ. ಮೇಲೆ ಹೇಳಿದ ಎರಡೂ ದಾವೆಗಳು ವಿಚಾರಣೆಗೆ ಬಾಕಿ ಇವೆ ಅನ್ನುವುದು ಸರಿ. ಚಂದ್ರಕಾಂತ್ ವಕೀಲರು ನನ್ನ ತಮ್ಮ. ನಾನು ಯಾವುದೇ ವ್ಯವಹಾರಗಳು ಮತ್ತು ದಾಖಲೆಗಳನ್ನು ಮಾಡುವ ಮೊದಲು ನನ್ನ ತಮ್ಮನೊಂದಿಗೆ ವಿಚಾರ ಮಾಡುತ್ತೇನೆ ಅನ್ನುವುದು ಸರಿಯಲ್ಲ. ಅಕ್ಷಯ್ ಕುಮಾರ್, ಅರುಣ್ ಕುಮಾರ್ ಮತ್ತು ಭೂಪಾಲನ್ ವಕೀಲರು ನನ್ನ ವಿರುದ್ಧ ಇಲ್ಲ ಅನ್ನುವುದು ಸರಿ, ಅವರು ಯಾರು ಅನ್ನುವುದು ನನಗೆ ಗೊತ್ತಿಲ್ಲ. ವಾದಿಯು ಅಸಲು ದಾವೆ 403/2019 ಮತ್ತು ಅಸಲು ದಾವೆ 26/2020 ರಲ್ಲಿ ದಿ.21.03.2019 ರ ಕಾರಾರಿನ

ಬಗ್ಗೆ ತಿಳಿಸಿದ್ದಾರೆ ಅನ್ನುವುದು ಸರಿ. 2019 ರಿಂದ ಇಲ್ಲಿಯವರೆಗೂ ಅಕ್ಷಯ್ ಕುಮಾರ್, ಅರುಣ್ ಕುಮಾರ್ ಮತ್ತು ಭೂಪಾಲನ್ ವಕೀಲರು ಯಾರು ಎನ್ನುವ ಬಗ್ಗೆ ವಿಚಾರಿಸಿಲ್ಲ.

5. 2017 ರಿಂದ ವಾದಿಯೇ ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದಾರೆ ಅನ್ನುವುದು ಸರಿ. ನಾನು ಈಗ ನಿಪಿ-1 ರಿಂದ 18 ದಾಖಲೆಗಳನ್ನು ನೋಡುತ್ತಿದ್ದು ಅವುಗಳಲ್ಲಿ ನಮೂದಿಸಿರುವ ನನ್ನ ವಿಳಾಸ ಸರಿ ಇದೆ. ಈ ದಾವೆಯಲ್ಲಿ ವಾದಿಯು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿ ನಾನು ಪ್ರತಿವಾದ ಪತ್ರ ಸಲ್ಲಿಸಿಲ್ಲ. ನಿಪಿ-1 ರಿಂದ 18 ದಾಖಲೆಗಳು ದಾವಾ ಆಸ್ತಿಗೆ ಸಂಬಂಧಪಟ್ಟಿವೆ ಅನ್ನುವುದು ಸರಿ. ಆದ್ದರಿಂದ ಎಲ್ಲಾ ದಾಖಲೆಗಳು ಕ್ರಮ ಬದ್ಧವಾಗಿವೆ ಅಂದರೆ ನಾನು ಕರಾರು ಪತ್ರ ಬರೆದುಕೊಟ್ಟಿಲ್ಲ. ವಾದಿಯ ವಿದ್ಯಾಭ್ಯಾಸದ ಬಗ್ಗೆ ನನಗೆ ಗೊತ್ತಿಲ್ಲ. ವಾದಿಗೆ ಇಂಗ್ಲೀಷ್ ನಲ್ಲಿ ಸಹಿ ಮಾಡುವುದನ್ನು ಹೊರತುಪಡಿಸಿ ಇಂಗ್ಲೀಷ್ ಭಾಷೆಯ ಬಗ್ಗೆ ಗೊತ್ತಿರುವುದಿಲ್ಲ ಅಂದರೆ ನನಗೆ ಗೊತ್ತಿಲ್ಲ. ವಾದಿ, ನಾನು ಮತ್ತು ಕರಾರು ಪತ್ರದ ಸಾಕ್ಷಿಗಳು ಚರ್ಚಿಸಿ ನಂತರ ನಿಪಿ-1 ರ ಬಗ್ಗೆ ತೀರ್ಮಾನಿಸಿರುತ್ತೇವೆ ಅನ್ನುವುದು ಸರಿಯಲ್ಲ. ನಿಪಿ-18 ಕ್ಕೆ ನಾನೇ ಛಾಪಾ ಕಾಗದ ತಂದು ಬರೆದುಕೊಟ್ಟಿದ್ದೇನೆ ಅನ್ನುವುದು ಸರಿಯಲ್ಲ. ನಾನೇ ನನ್ನ ಒಪ್ಪಿಗೆ ನೀಡಿ ಕರಾರ ಪತ್ರ ಬರೆದುಕೊಟ್ಟಿದ್ದರೂ ಸಹ ಕ್ರಯ ಪತ್ರ ಬರೆದುಕೊಡದ ಕಾರಣ ವಾದಿ ಈ ದಾವೆ ದಾಖಲಿಸಿದ್ದಾರೆ ಅಂದರೆ ಅವರು ಸುಳ್ಳು ಪ್ರಕರಣ ದಾಖಲಿಸಿರುವುದರಿಂದ ನಾನು ಅವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದೇನೆ. ಸದರಿ ಕ್ರಿಮಿನಲ್ ಪ್ರಕರಣ ವಿಚಾರಣೆಗೆ ಬಾಕಿ ಇದೆ ಅನ್ನುವುದು ಸರಿ.

6. ಈಗ ಮುನಿಯಪ್ಪ ರವರು ನನ್ನ ಮತ್ತು ವಾದಿಯ ವಿರುದ್ಧ ದಾವಾ ಆಸ್ತಿ ತನ್ನದು ಎಂದು ದಾವೆ ದಾಖಲಿಸಿದ್ದಾರೆ ಅನ್ನುವುದು ಸರಿ. ಸದರಿ ದಾವೆಯಲ್ಲಿ ನಾನು ಮತ್ತು ವಾದಿ ಹಾಜರಾಗಿ ಪ್ರಕರಣ ನಡೆಸುತ್ತಿದ್ದೇವೆ ಅನ್ನುವುದು ಸರಿ.

(ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಕೆ. ಎ. ನಾಗೇಶ)
1 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ
ಕೆಜಿಎಫ್